# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 934 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17.12.2024 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ನೋಂದಾಯಿತವಾಗಿರುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು ಎಷ್ಟು; ರಾಜ್ಯದ ಆದಾಯಕ್ಕೆ ಇವುಗಳ ಕೊಡುಗೆ ಏನು; ಕಾರ್ಯನಿರ್ವಹಿಸುತ್ತಿರುವ / ಅವಲಂಬಿಸಿರುವ ಕಾರ್ಮಿಕರ ಸಂಖ್ಯೆ ಎಷ್ಟು</td><td>ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದನ್ವಯ ನವೆಂಬರ್ 2024ರ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು 17,44,655 ಕೈಗಾರಿಕೆಗಳು ನೊಂದಣಿಯಾಗಿರುತ್ತವೆ. ಅವುಗಳ ಪೈಕಿ 17,05,826 ಸೂಕ್ಷ್ಮ ಕೈಗಾರಿಕೆಗಳು, 35,888 ಸಣ್ಣ ಕೈಗಾರಿಕೆಗಳಾಗಿರುತ್ತವೆ.,<br><br>ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಉದ್ಯೋಗವಕಾಶಗಳನ್ನು ಸೃಜಿಸುವುದರ ಜೊತೆಗೆ ಕಾಲ ಕಾಲಕ್ಕೆ ನಿಗದಿಪಡಿಸುವ GST ತೆರಿಗೆ, ಆಸ್ತಿ ತೆರಿಗೆ, ಸೆಸ್ ಇತ್ಯಾದಿಯನ್ನು ಸಂದಾಯ ಮಾಡುವ ಮೂಲಕ ರಾಜ್ಯದ ಆದಾಯಕ್ಕೆ ಕೊಡುಗೆ ನೀಡುತ್ತಿವೆ.<br><br>ಈ ಘಟಕಗಳಲ್ಲಿ ಸೃಜನೆಯಾಗಿರುವ ಉದ್ಯೋಗವಕಾಶಗಳ ಒಟ್ಟು ಸಂಖ್ಯೆ: 1,67,04,786 ಆಗಿರುತ್ತದೆ.</td></tr>
<tr><td>ಆ)</td><td>ಎಂಎಸ್.ಎಂ.ಇ ಗಳ ಬ್ಯಾಂಕ್ ಸಾಲದ ಮೇಲೆ ಈ ಹಿಂದೆ ವಿಧಿಸುತ್ತಿದ್ದ ಮುದ್ರಾಂಕ, ಪ್ರಸ್ತುತ ವಿಧಿಸುತ್ತಿರುವ ಮುದ್ರಾಂಕ ಶುಲ್ಕವೆಷ್ಟು; ಸದರಿ ಶುಲ್ಕವನ್ನು ಶೇ.0.1 ಅಥವಾ ಗರಿಷ್ಟ 25000ಕ್ಕೆ ಇಳಿಸಲು ಕಾಸಿಯಾ ಸರ್ಕಾರಕ್ಕೆ ಮನವಿ ಮಾಡಿದೆಯೇ; ಮಾಡಿದ್ದರೆ ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?</td><td>ಕೈಗಾರಿಕಾ ನೀತಿ 2020-25 ರಲ್ಲಿ "MSME ಘಟಕಗಳು ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ / ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಇತರೆ ಸರ್ಕಾರಿ / ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತು / ಸಂಸ್ಥೆಗಳಿಂದ ಹಂಚಿಕೆ ಪಡೆಯುವಲ್ಲಿ ಘಟಕಗಳು ಮಾಡಿಕೊಂಡ ಭೋಗ್ಯ ಪತ್ರ, ಭೋಗ್ಯ ಮತ್ತು ಕ್ರಯ ಪತ್ರ, ಉಪಭೋಗ್ಯ ಹಾಗೂ ಶುದ್ಧ ಕ್ರಯಪತ್ರಗಳಿಗೆ ಮುದ್ರಾಂಕ ಶುಲ್ಕದಲ್ಲಿ ಈ ಕೆಳಗಿನಂತೆ ವಿನಾಯಿತಿ ನೀಡಲಾಗಿದೆ.<br><br><table><tr><th>ಸಾಮಾನ್ಯ ಪ್ರವರ್ಗ</th><th>ವಿಶೇಷ ಪ್ರವರ್ಗ<br>(ಪ್ರ.ಜಾ / ಪ.ಪಂ., ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕರು)</th></tr><tr><td>ವಲಯ-1: 100%</td><td>ವಲಯ-1: 100%</td></tr><tr><td>ವಲಯ-2: 100%</td><td>ವಲಯ-2: 100%</td></tr><tr><td>ವಲಯ-3: 100%</td><td>ವಲಯ-3: 75%</td></tr></table><br>ಕಾಸಿಯಾ ಸಂಸ್ಥೆಯು ಮಾನ್ಯ ಸಣ್ಣ ಕೈಗಾರಿಕಾ ಸಚಿವರಿಗೆ ಸಲ್ಲಿಸಿರುವ ದಿನಾಂಕ: 20.11.2024ರ ಮನವಿ ಪತ್ರದಲ್ಲಿ ಮುದ್ರಾಂಕ ಶುಲ್ಕವನ್ನು ಶೇ.0.1 ರಿಂದ ಶೇ.0.5ಕ್ಕೆ ಹೆಚ್ಚಿಸಲಾಗಿದ್ದು, ರೂ.50,000/-ಕ್ಕೆ ನಿಗಧಿಪಡಿಸಲಾದ ಮೇಲಿನ ಮಿತಿಯನ್ನು ತೆಗೆದುಹಾಕಲಾಗಿದೆ. ಇದನ್ನು ಪರಿಷ್ಕರಿಸಿ ಮುದ್ರಾಂಕ ಶುಲ್ಕ ದರವನ್ನು ಶೇ.0.5 ರಿಂದ ಶೇ.0.1ಕ್ಕೆ ಕಡಿಮೆ ಮಾಡಲು ಹಾಗೂ ಸಮಾನ ಅಡಮಾನ ಮತ್ತು ಹೈಪೊಥಿಕೇಶನ್ ಎರಡಕ್ಕೂ ಗರಿಷ್ಟ ಮಿತಿಯನ್ನು ರೂ.50,000/-ಕ್ಕೆ</td></tr>
</table>

| | | |
|---|---|---|
| | | ನಿಗಧಿಪಡಿಸಲು ವಿನಂತಿಸಿಕೊಂಡಿರುತ್ತಾರೆ.<br><br>ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಇವರ ಮನವಿಯನ್ನು ಮಾನ್ಯ ಇಲಾಖಾ ಸಚಿವರ ಕಛೇರಿಯಲ್ಲಿ ದಿನಾಂಕ: 26.11.2024 ರಂದು ಸ್ವೀಕರಿಸಲಾಗಿದ್ದು ಸದರಿ ಮನವಿಯನ್ನು ಕಂದಾಯ ಸಚಿವರಿಗೆ ಮುಂದಿನ ಸೂಕ್ತ ಕ್ರಮ ಕೋರಿ ಕಳುಹಿಸಲಾಗಿದೆ. |
| ಇ) | ಕೈಗಾರಿಕೆಗಳಿಂದ ಹೊರ ಬರುವ ಘನ ತ್ಯಾಜ್ಯ ವಿಲೇವಾರಿಗೆ ವಿಧಿಸುತ್ತಿರುವ ಶುಲ್ಕ ದುಬಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಶುಲ್ಕವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ (ಸಂರಕ್ಷಣಾ) ಕಾಯ್ದೆ, 1986 ರಡಿಯಲ್ಲಿ ಜಾರಿಗೊಳಿಸಿರುವ ನಿಯಮಗಳಾದ ಅಪಾಯಕಾರಿ ಮತ್ತು ಇತರೆ ತ್ಯಾಜ್ಯಗಳ (ವ್ಯವಸ್ಥಾಪನೆ ಮತ್ತು ಗಡಿಯಾಚೆಗೆ ಸಾಗಣೆ) ನಿಯಮಗಳು, 2016, ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ನಿಯಮ, 2016 ರಡಿಯಲ್ಲಿ ಅಧಿಕಾರ ಪತ್ರಗಳನ್ನು ನೀಡಲಾಗುತ್ತಿದ್ದು, ಇವೆಲ್ಲವೂ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸಂಬಂಧಪಟ್ಟಿದ್ದು, ಈ ಅಧಿಕಾರ ಪತ್ರವನ್ನು ನೀಡಲು ಯಾವುದೇ ಶುಲ್ಕವನ್ನು ವಿಧಿಸಲಾಗುತ್ತಿಲ್ಲ. |
| ಈ) | ಪೀಣ್ಯ ಕೈಗಾರಿಕಾ ವಲಯದಲ್ಲಿ ಮೂಲ ಸೌಕರ್ಯಗಳ ಕೊರತೆಯಿದ್ದು ಇದರ ಸುಧಾರಣೆಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? | ಪೀಣ್ಯ ಕೈಗಾರಿಕಾ ವಲಯದಲ್ಲಿ ಮೂಲಸೌಕರ್ಯಗಳನ್ನು ಉನ್ನತೀಕರಿಸಲು ಒಟ್ಟು ರೂ.100 ಕೋಟಿ ಯೋಜನಾ ವೆಚ್ಚದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. |

ಸಿಐ 302 ಸಿಎಸ್ ಸಿ 2024

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು.